KATK010032612022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.75/2022</u>**

ಪ್ರಾ.ಸಾ. : **3**

ದೋ.ಸಾ. : **5**

ದಿ.**11.02.2025**

| | |
|---|---|
| ಹೆಸರು | : ಗಂಗಹನುಮಯ್ಯ |
| ತಂದೆಯ ಹೆಸರು | : ಮಾಳಗಪ್ಪ |
| ವಯಸ್ಸು | : **75** ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಪಾಲಸಂದ್ರ |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. ನಿಶಾನೆ ಪಿ3 ಮಹಜರಿನಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಶಾನೆ ಪಿ3(ಬಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ದಿ.26.06.2019 ರಂದು ನಮ್ಮ ಊರಿನಲ್ಲಿ ಮಾಡಿದ್ದೇನೆ. ವಸಂತ ರಾಮನ ಜೊತೆಗೆ ಆರೋಪಿತರು ಗಲಾಟೆ ಮಾಡಿದ್ದಾರೆಂದು ನಮ್ಮ ಊರಿಗೆ ಪೋಲೀಸರು ಬಂದು ಮಹಜರ್ ಮಾಡಿದರು. ಮಹಜರ್ ಮಾಡಿದ ಸ್ಥಳದ ಅಕ್ಕಪಕ್ಕ ರಾಮಚಂದ್ರಯ್ಯನವರ ಜಮೀನು ಸ.ನಂ 32/2 ಬಿ. ಗಲಾಟೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ವಸಂತರಾಮ ಮನೆಯಲ್ಲಿಟ್ಟಿದ್ದ, ಅವುಗಳನ್ನು ಆಮೇಲೆ ಕೊಡುತ್ತೇನೆಂದು ಹೇಳಿದನು.

**<u>ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿ :</u>**

2. ಮಹಜರಿನಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದು ಕೇಳಿದ ಪ್ರಶ್ನೆಗೆ ಬರೆದಾಗ ತಿಳಿದುಕೊಂಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಮಹಜರಿನಲ್ಲಿ ಏನು ಬರೆದಿದೆ ಎಂದು ಖುದ್ದಾಗಿ ನನಗೆ ಗೊತ್ತಿದೆ. ಆಗ್ನೇಯ ದಿಕ್ಕಿಗೆ ಏನು ಇದೆ ಎಂದು ಮಹಜರಿನಲ್ಲಿ ಬರೆದಿದ್ದಾರೆ ಎಂದು ಈಗ ಮರೆತುಹೋಗಿದೆ. ಮಹಜರಿನಲ್ಲಿ ಬರೆದ ಅಂಶಗಳು ಏನೂ

ಗೊತ್ತಿಲ್ಲದಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಸಂತರಾಮ ನನ್ನ ಸ್ವಂತ ಅಣ್ಣನ ಮಗ. ವಸಂತರಾಮ ನನ್ನ ಅಣ್ಣನ ಮಗನಾಗಿದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಇಬ್ಬರು ಪೋಲೀಸರು ಬಂದಿದ್ದರು, ಅವರ ಹೆಸರು ಗೊತ್ತಿಲ್ಲ. ಹನುಮಂತರಾಯಪ್ಪ ಮಹಜರಿಗೆ ಸಹಿ ಮಾಡಿದ್ದಾರೆ. ನನಗೆ ಏನೂ ಗೊತ್ತಿಲ್ಲದಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು